ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ಮಲ್ಪೆಯು ಪ್ರವಾಸೋದ್ಯಮದ ಕೇಂದ್ರದ ಬಗ್ಗೆ ಈ ಜಾಹೀರಾತು ಬಂದಿರುವುದು ನಿಜ. ಆದರೆ ಜಾಹೀರಾತಿನ ಕೊನೆಯ ದಿನವನ್ನು ಒಂದು ವಾರಗಳ ಕಾಲ ಪುನಃ ಎಕ್ಸ್‌ಟೆಂಡ್ ಮಾಡಲಾಗಿದೆ. ಮಾನ್ಯ ಸದಸ್ಯರು ಬಯಸಿದಲ್ಲಿ ಅದನ್ನು ಒಂದು ತಿಂಗಳು ಬೇಕಾದರೂ ಎಕ್ಸ್‌ಟೆಂಡ್ ಮಾಡೋಣ. ನಿಜವಾದ ಕಾರಣ ಏನು ಎಂದು ಹೇಳಿದರೆ ಮೊನ್ನೆ ನಡೆದಂಥ ಮಂತ್ರಿಮಂಡಲದ ಕೇಂದ್ರ ಪ್ರವಾಸೋದ್ಯಮದ ಸಭೆಯಲ್ಲಿ ಪ್ರಧಾನಮಂತ್ರಿಗಳು ಒಂದು ಮಾತನ್ನು ಹೇಳಿದರು. ೫ ಸ್ಟಾರ್ ಕಲ್ಚರ್, ೩ ಸ್ಟಾರ್ ಕಲ್ಚರ್ ಬೇಡ. ಡೊಮೆಸ್ಟಿಕ್ ಟೂರಿಸಂ ಬಗ್ಗೆ ಹೆಚ್ಚಿನ ಅವಕಾಶ ಕೊಡಿ ಎಂದು ಹೇಳಿದ್ದಾರೆ, ಕೇಂದ್ರದ ಬಗ್ಗೆ ಏನಾದರೂ ಹೇಳಿದರೆ ಹಿಂದಿನ ಸರ್ಕಾರ ಮಾಡಿದಂಥ ತೀರ್ಮಾನಗಳ ಬಗ್ಗೆ ಟೀಕೆ ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರು ಖಂಡಿತಾ ತಿಳಿದು ಕೊಳ್ಳಬಾರದು. ಬಹಳ ಆಲೋಚನೆ ಮಾಡಿ ಕಳೆದ ಈ ಸಭೆಯಲ್ಲಿ ಪ್ರವಾಸೋದ್ಯಮ ನಿಗಮವು ಇದರ ತೀರ್ಮಾನವನ್ನು ತೆಗೆದುಕೊಳ್ಳಲಿದೆ. ಇದುವರೆಗೂ ಖರ್ಚು ಮಾಡಿದಂಥ ಹಣ ೫೮ ಲಕ್ಷ ರೂಪಾಯಿಗಳು ಇನ್ನೂ ಪೆಂಡಿಂಗ್ ಬಿಲ್ಸ್ ಸುಮಾರು ೧೦ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಇದು ಪೂರ್ಣವಾಗಿ ನಿರ್ಮಾಣಗೊಳ್ಳಬೇಕಾದರೆ ಇದಕ್ಕೆ ಸಂಬಂಧಿಸಿದಂತೆ ಸುಮಾರು ಒಂದು ಕೋಟಿ ಹನ್ನೆರಡು ಲಕ್ಷ ರೂಪಾಯಿಗಳು ಆಗುತ್ತದೆ. ಒಟ್ಟಿಗೆ ಒಂದು ಕೋಟಿ ಐವತ್ತು ಲಕ್ಷ ಇದ್ದರೆ ೫೯ ಕೊಠಡಿಗಳ ಒಂದು ಪ್ರವಾಸೊದ್ಯಮ ಕೇಂದ್ರವನ್ನು ತಯಾರು ಮಾಡತಕ್ಕಂತಹ ಅವಕಾಶ ಅಲ್ಲಿ ಇದೆ. ಈಗ ೫೦ ಕೊಠಡಿಗಳಿಂದ ಕೂಡಿದ ಒಂದು ಪ್ರವಾಸಿಗರ ಕೇಂದ್ರವನ್ನು ತಯಾರು ಮಾಡುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಅಲ್ಲಿ ಇಂತಹ ಒಂದು ಪ್ರವಾಸಿ ಕೇಂದ್ರ ನಿರ್ಮಾಣವಾದರೆ, ಮಲ್ಪೆ ಅಂಥ ಸ್ಥಳದಲ್ಲಿ ಎಷ್ಟು ಪ್ರವಾಸಿಗಳು ಸಿಗಬಹುದು ಎಂಬ ಪ್ರಶ್ನೆ ನಮ್ಮ ಮುಂದೆ ಇದೆ. ಇದನ್ನು Un planned and un imagi-ativo plan ಎಂದು ಹೇಳುತ್ತೇವೆ. ಈ ನಿಗಮವು ಕನ್‌ಟ್ರೋನಿಂಗ್ ಬಾಡಿ, ಇದು ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡು ಕೆಲಸ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರಿಗೆ ಈ ಆಹ್ವಾನವನ್ನು ಕೊಡುತ್ತಾ ಇದ್ದೇವೆ, ಅವರು ಬೇಕಾದರೆ ತೆಗೆದುಕೊಳ್ಳಬಹುದು. ಈಗಾಗಲೇ ೮೦ ಲಕ್ಷ ಖರ್ಚು ಮಾಡಿದ್ದೇವೆ. ನೀವು ೮೦ ಲಕ್ಷ ಕೊಟ್ಟು ತೆಗೆದುಕೊಂಡರೆ ನಿಮಗೆ ಕೊಡುತ್ತೇವೆ. ಈ ವರ್ಷದಲ್ಲಿ ಕರ್ನಾಟಕ ಪ್ರವಾಸೋದ್ಯಮ ಹಣಕಾಸಿನ ಪರಿಸ್ಥಿತಿಯಂ ಸಂಧಾರಿಸಿದೆ. ೧೬ ಲಕ್ಷ ರೂಪಾಯಿಯ ನಿವ್ವಳ ಲಾಭವನ್ನು ಈ ಸಾರಿ ನಿಗಮಂದವರು ಗಳಿಸಿದ್ದಾರೆ. ನಮ್ಮ ಪ್ರಧಾನ ಮಂತ್ರಿಗಳು ತಿಳಿಸಿದ ರೀತಿಯಲ್ಲಿ ಅಂದರೆ ಡೊಮ್ಯಾಸ್ಟಿಕ್ ಟೂರಿಸಂ ಕಡೆಯಲ್ಲಿಯಾಗಿರತಕ್ಕ ವಿಚಾರದಲ್ಲಿ ನಾವು ಕ್ರಮ ತೆಗೆದು ಕೊಳ್ಳಬೇಕಾಗಿದೆ. ಹೆಚ್ಚು ಪ್ರವಾಸಿಗರನ್ನು ಆಕರ್ಷಿಸಿ ಹೆಚ್ಚು ಅವಕಾಶವನ್ನು ಮಾಡಿಕೊಡುವುದು ನಮ್ಮ ಕರ್ತವ್ಯವಾಗಿದೆ. ಪ್ರವಾಸಿಗರಿಗೆ ಕ್ಲೀನ್ ಓಪನ್ ಏರಿಯಾ, ಬೇಸಿಕ್ ಸ್ಯಾನಿಟರಿ ಸೌಲಭ್ಯವನ್ನು ಕೊಡಬೇಕಾಗಿದೆ. ಇದರಿಂದ ೮೦ ಲಕ್ಷ ಬಂದರೆ ನಾವು ೪೦ ಕೇಂದ್ರಗಳಲ್ಲಿ ಚಿಕ್ಕ ಚಿಕ್ಕ ತಾಣಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಅವಕಾಶ ಆಗುತ್ತದೆ. ಮಾನ್ಯ ಸದಸ್ಯರು ಅಪೇಕ್ಷೆ ಪಟ್ಟರೆ ಇದರ ದಿನಾಂಕವನ್ನು ಸ್ವಲ್ಪ ಮುಂದಕ್ಕೆ ಹಾಕುತ್ತೇವೆ. It is open for all. The highest bidder will get it. The highest bidder, whoever wants it on a long lease will get it. ನಿಮಗಕ್ಕೆ ಲಾಭವಾಗುವ ರೀತಿಯಲ್ಲಿ ಯಾರು ಬಂದರೂ ಅವರಿಗೆ ನಾವು ಇದನ್ನು ಕೊಡಲು ತಯಾರಿದ್ದೇವೆ. ಶ್ರೀನಿವಾಸ್‌ರವರೇ ಬರಲಿ, ಅವರ ಮಿತ್ರರೇ ಬರಲಿ ನಾವು ಕೊಡಲು ಸಿದ್ಧರಿದ್ದೇವೆ.

5. ರಾಜ್ಯದ ಪ್ರಾಥಮಿಕ ಶಿಕ್ಷಕರು ತಮ್ಮ ಬೇಡಿಕೆಗಳನ್ನು ಈಡೇರಿಸಲು ಅನ್ನ ಸತ್ಯಾಗ್ರಹ ಮಾಡಿರುವುದು.

ಶ್ರೀ ಬಿ. ಸ್ವಾಮಿರಾವ್.—ಈ ದಿನ ಅಂದರೆ ದಿನಾಂಕ ೧೦-೨-೧೯೮೬ ರಂದು ರಾಜ್ಯದ ಪ್ರಾಥಮಿಕ ಶಿಕ್ಷಕರ ಸಮಸ್ಯೆಗಳ ಪರಿಹಾರಕ್ಕಾಗಿ ರಾಜ್ಯದಾದ್ಯಂತ ಪ್ರಾಥಮಿಕ ಶಿಕ್ಷಕರು ವಿಧಾನ ಸೌಧದ ಮುಂದೆ ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿ ಅನ್ನ ಸತ್ಯಾಗ್ರಹ ಮಾಡಿ ತಮ್ಮ ಬೇಡಿಕೆಗಳನ್ನು ಪೂರೈಸುವಂತೆ ಸರ್ಕಾರದವರನ್ನು ಒತ್ತಾಯಿಸುತ್ತಿರುವ ಬಗ್ಗೆ ಗಂಭೀರವಾಪಕ್ಕೆ ಒಳಗಾಗಿರುವ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ವೀರಣ್ಣ.—ಇವರ ಬಗ್ಗೆ ಸಂಬಂಧಪಟ್ಟ ಸಚಿವರು ನಾಳೆ ಹೇಳಿಕೆಯನ್ನು ಕೊಡುತ್ತಾರೆ.